# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೆ:ಮೈಸೂರು ಮರ್ಕಂಟೈಲ್ ಲಿಮಿಟೆಡ್ ಕಂಪನಿಗೆ ಮಂಜೂರಾಗಿರುವ ದೊಡ್ಡತಪ್ಪಲೆ ಕಿರು ಜಲ ವಿದ್ಯುತ್ ಯೋಜನೆಗೆ ಎತ್ತಿನಹೊಳೆಯಿಂದ (Non-consumptive) ನೀರನ್ನು ಪಡೆಯಲು ನೀಡಿರುವ ಪರವಾನಗಿಯನ್ನು ನವೀಕರಿಸುವ ಕುರಿತು.

*ಓದಲಾಗಿದೆ:*

1) ಸರ್ಕಾರದ ಆದೇಶ ಸಂಖ್ಯೆ: ಜಸಂಇ 95 ವಿಬ್ಯಾಇ 2008 ದಿನಾಂಕ:09.07.2009
2) ಸರ್ಕಾರದ ಪತ್ರ ಸಂಖ್ಯೆ: ಜಸಂಇ 18 ವಿಬ್ಯಾಇ 2012 ದಿನಾಂಕ:23.08.2013.
3) ಮುಖ್ಯ ಇಂಜನೀಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆರವರು ಸರ್ಕಾರಕ್ಕೆ ಸಲ್ಲಿಸಿರುವ ವರದಿ ಸಂಖ್ಯೆ:ಜಸಅ:ಯೋಮತ:ತಾಸ-1:ಸಿ-8:64:ಎ.ಕಿ.ಜ:2017-18/737 ದಿನಾಂಕ:24.07.2018.
4) ದಿನಾಂಕ:19.08.2019ರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ.
5) ಕಾರ್ಯಪಾಲಕ ಅಭಿಯಂತರರು, ಎತ್ತಿನಹೊಳೆ ಯೋಜನಾ ವಿಭಾಗ ಸಂಖ್ಯೆ-01, ಸಕಲೇಶಪುರ ರವರು M/s.Mysore Mercantile Company Limited ರವರಿಗೆ ಬರೆದಿರುವ ಪತ್ರ ಸಂಖ್ಯೆ:ಕಾ.ಇಂ/ವಿಜನಿನಿ/ಎ.ಹೊ.ಯೋ/ವಿಭಾಗ ನಂ.1/ಸ/2019-20/714 ದಿನಾಂಕ: 01.08.2019ರ ಪತ್ರ.
6) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಪತ್ರ ಸಂಖ್ಯೆ:ವಿಜೆಎನ್ಎಲ್/MMCL /145/2019-20/2124 ದಿನಾಂಕ:05.11.2019.
7) ದಿನಾಂಕ:22.01.2020 ರಂದು ವಿಷಯದ ಕುರಿತು ಅಪರ ಮುಖ್ಯ ಕಾರ್ಯದರ್ಶಿಗಳು, ಜಸಂಇ ಅವರ ಅಧ್ಯಕ್ಷತೆಯಲ್ಲಿ ಕೈಗಾರಿಕೆಗಳಿಗೆ ನೀರಿನ ಹಂಚಿಕೆ ಮಾಡುವ ಕುರಿತು ಪರಿಶೀಲಿಸಲು ರಚಿಸಿರುವ ಸಮಿತಿ ಸಭೆಯ ನಡವಳಿಗಳು.

*ಪ್ರಸ್ತಾವನೆ:*

ಮೇಲೆ ಓದಲಾದ ಉಲ್ಲೇಖ (1)ರ ಸರ್ಕಾರದ ಆದೇಶ ದಿನಾಂಕ:09.07.2009ರಲ್ಲಿ ಮೆ:ಮೈಸೂರು ಮರ್ಕಂಟೈಲ್ ಲಿಮಿಟೆಡ್ ಕಂಪನಿಗೆ ಮಂಜೂರಾಗಿರುವ ದೊಡ್ಡತಪ್ಪಲೆ ಕಿರು ಜಲ ವಿದ್ಯುತ್ ಯೋಜನೆಗೆ ಎತ್ತಿನಹೊಳೆಯಿಂದ (Non-consumptive) ನೀರನ್ನು ಪಡೆಯಲು ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿರುತ್ತದೆ.

ಮೈಸೂರು ಮರ್ಕಂಟೈಲ್ ಲಿಮಿಟೆಡ್ ಕಂಪನಿಯ 3MW capacity Hydro Power Plant ನಡೆಸುವ ಐದು ವರ್ಷದ ಪರವಾನಗಿಯ ಅವಧಿ ದಿನಾಂಕ:08.07.2014ರಂದು ಮುಕ್ತಾಯಗೊಂಡಿದ್ದು ನವೀಕರಿಸುವ ಬಗ್ಗೆ ಸರ್ಕಾರವು ನಿರ್ಣಯಿಸಿರುವುದಿಲ್ಲವೆಂದು ಸದರಿ ಕಂಪನಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಅರ್ಜಿ ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಉಲ್ಲೇಖಿತ(4) ದಿನಾಂಕ:19.08.2019ರ ಆದೇಶದಲ್ಲಿ Operative ಭಾಗ ಈ ಕೆಳಕಂಡಂತಿರುತ್ತದೆ.

> *"In view of the submissions made and in the facts of the case, the writ petition is* ***disposed*** *of with a direction to respondent No.1 to consider and decide the representation submitted by the petitioner with regard to removal of the Government Order dated:09.07.2009 by a speaking order in accordance with law within a period of two months from the date of receipt of certified copy of the order passed today"*

M/s. Mysore Mercantile Company Limited ರವರಿಗೆ ಕಿರು ಜಲ ವಿದ್ಯುತ್ ಯೋಜನೆಗೆ ನೀಡಿರುವ ಪರವಾನಗಿಯಲ್ಲಿ ಸರ್ಕಾರ ಮುಂದೆ ಈ ಪ್ರದೇಶದಲ್ಲಿ ಕೈಗೊಳ್ಳಬಹುದಾದ ಯೋಜನೆಗಳಿಗೆ ಕಂಪನಿಯು ಬದ್ಧವಾಗಿರಬೇಕೆಂದು ಉಲ್ಲೇಖ (1)ರ ಆದೇಶದಲ್ಲಿ ತಿಳಿಸಲಾಗಿದ್ದು, ಸರ್ಕಾರವು ಈಗಾಗಲೇ ಉಲ್ಲೇಖ(2)ರ ಪತ್ರದಲ್ಲಿ ಎತ್ತಿನಹೊಳೆ ತಿರುವು ಯೋಜನೆ ಪ್ರಾರಂಭ ಮಾಡುವ ವರೆಗೆ M/s. Mysore Mercantile

Company Limited ರವರು ಕಿರುಜಲ ವಿದ್ಯುತ್‌ಅನ್ನು ಉತ್ಪಾದಿಸಬಹುದಾಗಿದೆ ಎಂದು ಕೂಡ ತಿಳಿಯಪಡಿಸಲಾಗಿರುತ್ತದೆ. ಸದರಿ ಉಲ್ಲೇಖ(1)ರ ಆದೇಶದ ಕಂಡಿಕೆ (5)ರಲ್ಲಿ ಕಾಮಗಾರಿಯ ಬಳಿಯ ಹಳ್ಳಗಳ ದಂಡೆಗಳಿಗೆ ಸೂಕ್ತ ರಕ್ಷಣಾಗೋಡೆಗಳನ್ನು ಸಂಸ್ಥೆಯು ತನ್ನ ಸ್ವಂತ ವೆಚ್ಚದಲ್ಲಿ ನಿರ್ಮಿಸತಕ್ಕದ್ದು ಎಂಬ ಷರತ್ತನ್ನು ಸಹಾ ವಿಧಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ(3)ರ ಪತ್ರದಲ್ಲಿ ಮುಖ್ಯ ಇಂಜನೀಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆರವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ MMCL ರವರು ಸರ್ಕಾರದ ಉಲ್ಲೇಖ (1)ರ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸದೇ ಇರುವುದರಿಂದ ಪರವಾನಗಿಯನ್ನು ನವೀಕರಿಸುವ ಅವಶ್ಯಕತೆ ಕಂಡುಬರುವುದಿಲ್ಲವೆಂದು ಹಾಗೂ ಕರಾರು ಮಾಡಿಕೊಳ್ಳದೆ ರಾಜಧನವನ್ನು ಸಹ ಪಾವತಿಸದೇ ನೀರನ್ನು ಉಪಯೋಗಿಸುತ್ತಿರುವುದರಿಂದ ಈ ಸಂಸ್ಥೆಗೆ ದಂಡ ವಿಧಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಮೇಲೆ ಓದಲಾದ ಉಲ್ಲೇಖ(5)ರ ಪತ್ರದಲ್ಲಿ ಕಾರ್ಯಪಾಲಕ ಅಭಿಯಂತರರು, ಎತ್ತಿನಹೊಳೆ ಯೋಜನಾ ವಿಭಾಗ ಸಕಲೇಶಪುರ ರವರು MMCL ರವರಿಗೆ ವಿಳಾಸಿಸಿ ಸರ್ಕಾರದ ಉಲ್ಲೇಖ(1)ರ ಆದೇಶದ ಬಹುಪಾಲು ಷರತ್ತುಗಳನ್ನು ಉಲ್ಲಂಘಿಸಿ ಸರ್ಕಾರ ನೀಡಿದ ಪರವಾನಗಿಯ ಐದು ವರ್ಷದ ಅವಧಿ ಈಗಾಗಲೇ ಮುಗಿದಿದ್ದರೂ ಸರ್ಕಾರದ ನಿಬಂಧನೆ ಮತ್ತು ಷರತ್ತುಗಳನ್ನು ಗಾಳಿಗೆ ತೂರಿ ಸರ್ಕಾರಕ್ಕೆ ವಂಚಿಸಿ ಕಾನೂನು ಭಾಹಿರವಾಗಿ ವಿದ್ಯುತ್ ಉತ್ಪಾದನೆ ಮಾಡಿರುವುದನ್ನು (ಜನವರಿ 2014 ರಿಂದ ಜೂನ್2019ರ ವರೆಗಿನ ಉತ್ಪಾದನೆಯ ವಿವರಗಳೊಂದಿಗೆ), ಮೆ:ಕೆ.ಪಿ.ಟಿ.ಸಿ.ಎಲ್ ಸಂಸ್ಥೆ ನೀಡಿರುವ ವರದಿಯನ್ನು ಉಲ್ಲೇಖಿಸಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಉಲ್ಲೇಖ(6)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ವಿಜನಿನಿ ರವರು MMCL ರವರಿಗೆ ಉಲ್ಲೇಖ (1)ರನ್ವಯ 3MW capacity Hydro Power Plant ನಡೆಸಲು ನೀಡಲಾಗಿದ್ದ 5 ವರ್ಷಗಳ ಪರವಾನಗಿಯು ದಿನಾಂಕ:08.07.2014 ರಂದು ಮುಕ್ತಾಯಗೊಂಡಿದ್ದು, ಎತ್ತಿನಹೊಳೆ ಯೋಜನೆಯನ್ನು ಪೂರ್ಣಗೊಳಿಸಿ ಸುಸೂತ್ರವಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ನವೀಕರಿಸುವುದು ಸಮಂಜಸವಲ್ಲವೆಂದು ಅಭಿಪ್ರಾಯಿಸಿರುತ್ತಾರೆ.

ದಿನಾಂಕ: 22.01.2020 ರಂದು ವಿಷಯದ ಕುರಿತು ಅಪರ ಮುಖ್ಯಕಾರ್ಯದರ್ಶಿಗಳು, ಜಸಂಇ ಅವರ ಅಧ್ಯಕ್ಷತೆಯಲ್ಲಿ ಕೈಗಾರಿಕೆಗಳಿಗೆ ನೀರಿನ ಹಂಚಿಕೆ ಮಾಡುವ ಕುರಿತು ಪರಿಶೀಲಿಸಲು ರಚಿಸಿರುವ ಸಮಿತಿ ಸಭೆಯಲ್ಲಿ MMCL ರವರಿಗೆ ಕಿರು ಜಲ ವಿದ್ಯುತ್ ಯೋಜನೆಯ ಪರವಾನಗಿಯನ್ನು ನವೀಕರಿಸುವ ಬಗ್ಗೆ ಕುಲಂಕಷವಾಗಿ ಚರ್ಚಿಸಲಾಗಿ ಸದರಿ ಸಭೆಯಲ್ಲಿ ಪರವಾನಗಿಯನ್ನು ನವೀಕರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಿಷಯದ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 166 ವಿಬ್ಯಾಇ 2017 ಬೆಂಗಳೂರು ದಿನಾಂಕ:14.07.2020**

ಮೆ: ಮೈಸೂರು ಮರ್ಕೆಂಟೈಲ್ ಲಿಮಿಟೆಡ್ ಕಂಪನಿ, ಬೆಂಗಳೂರು ಇವರು, 3.00 ಮೆಗಾ ವ್ಯಾಟ್ ಸಾಮರ್ಥ್ಯದ ದೊಡ್ಡತಪ್ಪಲೆ ಕಿರು ಜಲ ವಿದ್ಯುತ್ ಯೋಜನೆಗಾಗಿ ಎತ್ತಿನಹೊಳೆಯಿಂದ ನೈಸರ್ಗಿಕ ಜಲ ಸಂಪನ್ಮೂಲದಿಂದ ಬಳಕೆಯೇತರ (Non-consumptive use) ಉದ್ದೇಶಕ್ಕಾಗಿ ನೀರನ್ನೆತ್ತಿ ಬಳಸಲು, ಪ್ರಸ್ತಾಪಿತ MMCL ಸಂಸ್ಥೆಯು ಉತ್ಪಾದಿಸುವ ವಿದ್ಯುತ್ತನ್ನು ರಾಜ್ಯ ಇಂಧನ ಇಲಾಖೆಗೆ ಪ್ರಥಮ ಆದ್ಯತೆಯ ಮೇರೆಗೆ ನೀಡಬೇಕೆನ್ನುವ ಷರತ್ತು ಹಾಗೂ ಇತರೆ ಷರತ್ತುಗಳ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 95 ವಿಬ್ಯಾಇ 2008 ದಿನಾಂಕ:09.07.2009ರಲ್ಲಿ ಪರವಾನಗಿ ನೀಡಲಾಗಿತ್ತು. ಸದರಿ ಪರವಾನಗಿಯು 5 (ಐದು) ವರ್ಷಗಳ ವರೆಗೆ ಚಾಲ್ತಿಯಲ್ಲಿದ್ದು, ಈ ಅವಧಿಯಲ್ಲಿ ಸದರಿ ಆದೇಶದಲ್ಲಿ ವಿಧಿಸಲಾಗಿದ್ದ ಹಲವಾರು ಷರತ್ತುಗಳನ್ನು ಸದರಿ ಸಂಸ್ಥೆಯು ಉಲ್ಲಂಘಿಸಿರುತ್ತದೆ. ಇದರೊಂದಿಗೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಸಹ ಪರಿಗಣಿಸಿ, ದಿನಾಂಕ:08.07.2014ರಂದು ಮುಕ್ತಾಯಗೊಂಡಿರುವ ಸದರಿ ಕಿರು ಜಲ ವಿದ್ಯುತ್ ಯೋಜನೆಯ

ಪರವಾನಗಿಯನ್ನು ನವೀಕರಿಸುವ M/s. Mysore Mercantile Company Limited ರವರ ಕೋರಿಕೆ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

14/7/2020

(ಎಸ್.ಎನ್.ಕೇಶವಪ್ರಕಾಶ್)
ಸರ್ಕಾರದ ವಿಶೇಷ ಕರ್ತವ್ಯಾಧಿಕಾರಿ (ತಾ-4)
ಜಲಸಂಪನ್ಮೂಲ ಇಲಾಖೆ

ಗೆ:

1) ಮಹಾಲೇಖಪಾಲರು, ಕರ್ನಾಟಕ (ಲೆಕ್ಕ ಪತ್ರ / ಲೆಕ್ಕಪರಿಶೋಧನೆ), ಬೆಂಗಳೂರು
2) ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
3) ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು.
4) ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು-1
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7) ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8) ಜಲ ಸಂಪನ್ಮೂಲ ಇಲಾಖೆಯ ಎಲ್ಲಾ ಉಪ ಕಾರ್ಯದರ್ಶಿಗಳು/ವಿಶೇಷ ಕರ್ತವ್ಯಾಧಿಕಾರಿಗಳು/ಸರ್ಕಾರದ ಅಧೀನ ಕಾರ್ಯದರ್ಶಿಗಳು
9) ಮೆ:ಮೈಸೂರು ಮರ್ಕಂಟೈಲ್ ಲಿಮಿಟೆಡ್ ಕಂಪನಿ, #201,202 , 2ನೇ ಮಹಡಿ, ನಂ87, ಕೆ.ಆರ್ ರೋಡ್, ಬಸವನಗುಡಿ, ಬೆಂಗಳೂರು-560004.
10) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿ.

*****